ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

<u>ಸಿ.ಸಿ.ನಂ.**2153/2023.**</u>

ದಿನಾಂಕಃ**29.01.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಮಾರುತಿ | ಚಾಸಾ-4,<br>ಪ್ರಾಸಾ-2 |
| ತಂದೆಯ ಹೆಸರು | ಶೇಖರಪ್ಪ | |
| ವಯಸ್ಸು (ವರ್ಷಗಳಲ್ಲಿ) | 29 | |
| ಉದ್ಯೋಗ | ಕೂಲಿ ಕೆಲಸ | |
| ವಾಸ | ದೊಡ್ಡಪಟ್ಟಣಗೆರೆ ಗ್ರಾಮ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಯಾವುದೇ ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಅಪಘಾತ ನೋಡಿರುವುದಾಗಿ ಪೊಲೀಸರಿಗೆ ಹೇಳಿಕೆ ನೀಡಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ. ಪೊಲೀಸರು ಒಂದು ದಾಖಲೆಗೆ ನನ್ನ ಸಹಿ ಪಡೆದಿದ್ದರು. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ, ಸದರಿ ದಾಖಲೆಯು ಶವಪಂಚನಾಮೆಯಾಗಿದ್ದು ಅದನ್ನು ನಿಪಿ 7 ಎಂದು ಸಹಿಯನ್ನು ನಿಪಿ7 ಎ ಎಂದು ಗುರುತಿಸಲಾಯಿತು. ನಿಪಿ7 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಸದರಿ ಸಹಿಯನ್ನು ಪೊಲೀಸರ ಕೋರಿಕೆಯ ಮೇರೆಗೆ ಹಾಕಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸ ಸ ಅ ರವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀಸವಾಲುಃ ಮಾನ್ಯ ಸ ಸ ಅ ರವಸಿರಿಂದ ಃ

ದಿಃ20.12.2022 ರಂದು ನಾನು ಕಡೂರಿನಿಂದ ಮನೆಗೆ ಬೇಕಾದ ವಸ್ತುಗಳನ್ನು

ತರಲು ಬೈಕಿನಲ್ಲಿ ಹೋಗುತ್ತಿದ್ದಾಗ ನಮ್ಮ ಬೀದಿಯ ಮಿಥುನ್ ಸಹಃ ಆತ ಕೆಲಸ ಮಾಡುವ ಪೆಟ್ರೋಲ್ ಬಂಕ್ ಗೆ ಹೋಗಲೆಂದು ಆತನ ಬೈಕ್ ಸಂ.ಕೆಎ 18 ಡಬ್ಲ್ಯೂ 6848 ರಲ್ಲಿ ಹೊರಟನು ಎಂದರೆ ಸರಿಯಲ್ಲ. ಮಿಥುನ್ ನನ್ನ ಬೈಕಿನ ಮುಂದೆ ರಸ್ತೆಯ ಎಡಬದಿಯಲ್ಲಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ಸಂಜೆ 7.45 ಕ್ಕೆ ಕೋಠಾರಿರವರ ಅಡಿಕೆ ತೋಟದ ಎದುರು ಕಡೂರು ಕಡೆಯಿಂದ ಒಂದು ಟ್ರ್ಯಾಕ್ಟರ್ ಅನ್ನು ಅದರ ಚಾಲಕ ಅತೀವೇಗವಾಗಿ ಚಾಲನೆ ಮಾಡಿಕೊಂಡು ಬಂದು ನಿಯಂತ್ರಿಸಲಾಗದೆ ರಸ್ತೆಯ ಬಲಕ್ಕೆ ಬಂದು ಮಿಥುನ್ ರವರ ಬೈಕಿಗೆ ಡಿಕ್ಕಿಪಡಿಸಿದ ಎಂದರೆ ನನಗೆ ಗೊತ್ತಿಲ್ಲ.

ನಂತರ, ಮಿಥುನ್ ರಸ್ತೆ ಮೇಲೆ ಬಿದ್ದು ಅಪಘಾತವಾಯಿತು ಎಂದರೆ ನನಗೆ ಗೊತ್ತಿಲ್ಲ. ನಂತರ ನಾನು ಬೈಕ್ ನಿಲ್ಲಿಸಿ ನೋಡುತ್ತಿರುವಾಗ, ನಮ್ಮ ಊರಿನ ಚಾಸಾ 6, 10 ರವರು ಬಂದರು ಎಂದರೆ ಸರಿಯಲ್ಲ. ನಾವು 3 ಜನ ಮಿಥುನ್ ಗೆ ನೀರು ಕುಡಿಸಿ ನೋಡಿದಾಗ ಆತನ ತಲೆಗೆ ಮುಖಕ್ಕೆ ಮೈಕೈಗೆ ತೀವ್ರ ಗಾಯವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಚಾಸಾ 6 ರವರು ಅಂಬೂಲೆನ್ಸ್ ಗೆ ಕರೆ ಮಾಡಿ, ಮಿಥುನ್ ರವರ ಕುಟುಂಬದವರಿಗೂ ಫೋನ್ ಮಾಡಿ ವಿಚಾರ ತಿಳಿಸಿದರು ಎಂದರೆ ಸರಿಯಲ್ಲ.

ಟ್ರ್ಯಾಕ್ಟರಿನ ಇಂಜಿನ್ ನೋಡಿದಾಗ ಅದು ಹಸಿರು ಬಣ್ಣದ್ದಾಗಿದ್ದು ಅದಕ್ಕೆ ನೊಂದಣಿ ಸಂಖ್ಯೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಂತರ ನಾವು ಇಂಜಿನ್ ನ ಚಾಸಿಸ್ ಸಂ. ನೋಡಿದಾಗ ಅದು 035713 ಆಗಿತ್ತು ಎಂದರೆ ಸರಿಯಲ್ಲ. ನಂತರ ಅಂಬೂಲೆನ್ಸ್ ಬಂದಿದ್ದು, ಕಡೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಂತರ ರಾತ್ರಿ ಮಿಥುನ್ ಅನ್ನು ಶಿವಮೊಗ್ಗದ ಆಸ್ಪತ್ರೆಗೆ ಕಳುಹಿಸಿದ್ದು, ರಾತ್ರಿ 8.45 ರಲ್ಲಿ ತರೀಕೆರೆ ಸಮೀಪ ಚಿಕಿತ್ಸೆ ಫಲಿಸದೆ ಮೃತಪಟ್ಟ ಎಂದು ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

ನಂತರ ದಿಃ21.12.2021 ರಂದು ಪೊಲೀಸರು ಅಪಘಾತದ ವಿಚಾರವಾಗಿ ಶವ ತನಿಖಾ ಕಾಲದಲ್ಲಿ ನಾನು ಪಂಚರಾಗಿ ಹೋಗಿದ್ದು ಪೊಲೀಸರು ನನ್ನ ಮತ್ತು ಚಾಸಾ 5, 6 ರವರ ಸಮಕ್ಷಮ ಮಧ್ಯಾಹ್ನ 1 ರಿಂದ 3.30 ರಲ್ಲಿ ನಿಪಿ 7 ರಂತೆ ಶವ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು

ಅಲ್ಲಗಳದ ಕಾರಣ ಹೇಳಿಕೆಯನ್ನು ನಿಪಿ8 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹಃ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ಶ್ರೀ. ಎನ್ ಎಸ್ ವಕೀಲರಿಂದಃ ಇರುವುದಿಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.